ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 04.09.2023.**

**ಪಾಟೀ ಸವಾಲು - 8 ನೇ ಪ್ರತಿವಾದಿ ಪರ ವಕೀಲರಿಂದ**

28) ಕಳೆದ 10-15 ವರ್ಷಗಳಿಂದ ಕೊಡಿಗೇನಹಳ್ಳಿಯಲ್ಲಿ ವಾಸ ಮಾಡುತ್ತಿದ್ದೇನೆ. ನನಗೆ ಈಗ 57 ವರ್ಷ ವಯಸ್ಸು. ನನ್ನ ಮತದಾರರ ಪಟ್ಟಿ ಕೊಡಿಗೇನಹಳ್ಳಿಯಲ್ಲಿ ಸುಮಾರು 20 ವರ್ಷಗಳಿಂದ ಇರುತ್ತದೆ. ಅದಕ್ಕಿಂತ ಮುಂಚೇ ನನ್ನ ಮತದಾರರ ಪಟ್ಟಿ ಅಣ್ಣೇಶ್ವರದಲ್ಲಿ ಇತ್ತು. ನಾನು ಮತ್ತೆ ಹೇಳುತ್ತೇನೆ ನನ್ನ ಮತದಾರರ ಪಟ್ಟಿ ಯಾವಾಗಲೂ ಕೊಡಿಗೇನಹಳ್ಳಿಯಲ್ಲೇ ಇರುತ್ತದೆ, ನಾನು ಅಲ್ಲೇ ವಿದ್ಯಾಭ್ಯಾಸ ಮಾಡುತ್ತಿದ್ದೆ. ನನ್ನ ತಂದೆ ರಾಮಯ್ಯನ ಮತದಾರರ ಪಟ್ಟಿ ಕೂಡ ಕಳೆದ 60 ವರ್ಷಗಳಿಂದಲೂ ಕೊಡಿಗೇಹಳ್ಳಿಯಲ್ಲೇ ಇದೆ ಎಂದರೆ ಸರಿಯಲ್ಲ. ನನ್ನ ತಂದೆ ಕೂಲಿ ಕೆಲಸ ಮಾಡುತ್ತಾರೆ. ನನ್ನ ತಂದೆ ಯಾವ ವರ್ಷದಿಂದ PWD ಯಲ್ಲಿ ಗ್ಯಾಂಗಮ್ಯಾನ್ ಆಗಿದ್ದಾರೆಂದು ನನಗೆ ನೆನಪಿಲ್ಲ. ನನ್ನ ತಂದೆಯ ಗ್ಯಾಂಗಮ್ಯಾನ್ ಉದ್ಯೋಗ ಸರ್ಕಾರಿ ಕೆಲಸ ಎಂದರೆ ಅಲ್ಲ. ಈಗ ಕೊಡಿಗೇನಹಳ್ಳಿನಯಲ್ಲಿ ನಾವು ವಾಸ ಮಾಡುತ್ತಿರುವ ಮನೆ ನಮ್ಮ ತಂದೆಯ ಹೆಸರಿನಲ್ಲಿ ಇರುತ್ತದೆ. ಅದನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಯಾವುದೇ ನಿವೇಶನ ಇರುವುದಿಲ್ಲ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ.

29) ದಾವಾ ಐಟಂ ನಂ.2 ಅಂದರೆ ಸರ್ವೆ ನಂ.71/5 ಇದು 1 ನೇ ಪ್ರತಿವಾದಿ ಅಜ್ಜಪ್ಪನಿಗೆ ಹೇಗೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆ. ಅವುಗಳಲ್ಲಿ ದಾವಾ ಐಟಂ ನಂ.2 ಕೂಡ ದರಕಾಸ್ತಿನ ಮೂಲಕ ಬಂದಿದೆ ಎಂದು ಬರೆಸಿದ್ದೇನೆ. ಐಟಂ ನಂ.2 ರ ದಾಖಲೆಗಳನ್ನು ಸ್ವಲ್ಪ ಸ್ವಲ್ಪ ನೋಡಿದ್ದೇನೆ, ಪೂರ್ತಿಯಾಗಿ ನೋಡಿಲ್ಲ. ಐಟಂ ನಂ.2 ರ ದಾಖಲೆಗಳು ನಾನು ಹುಟ್ಟುವ ಮುಂಚೆಯಿಂದಲೂ 1 ನೇ ಪ್ರತಿವಾದಿಯ ಹೆಸರಿನಲ್ಲಿ ನಮೂದಾಗಿರುತ್ತವೆ. 1 ನೇ ಪ್ರತಿವಾದಿ ಐಟಂ ನಂ.3 ನ್ನು 1961 ರಲ್ಲಿ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತ ಓಬಳಪ್ಪನ

ಕಡೆಯಿಂದ ಆಸ್ತಿಗಳೇನಾದರೂ ಬಂದಿದ್ದವೇ? ಎಂದರೆ ಬಂದಿರಲಿಲ್ಲ. 1 ನೇ ಪ್ರತಿವಾದಿ ವ್ಯವಸಾಯ ಮಾಡುತ್ತಿದ್ದರು. ಅವರು ವ್ಯವಸಾಯ ಮತ್ತು ಕೂಲಿ ಮಾಡಿದ ಹಣದಿಂದ ಐಟಂ ನಂ.2 ನ್ನು 1962 ರಲ್ಲಿ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಗಳು ಮತ್ತು 1 ನೇ ಪ್ರತಿವಾದಿ ಯಾವತ್ತೂ ಒಟ್ಟು ಕುಟುಂಬದಲ್ಲಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. ನಾವೆಲ್ಲರೂ ಒಟ್ಟಿಗೆ ಇದ್ದ ಬಗ್ಗೆ ನಮ್ಮ ಬಳಿ ದಾಖಲೆಗಳು ಇವೆಯೇ? ಎಂದರೆ ಇರುವುದಿಲ್ಲ.

30) 1 ನೇ ಪ್ರತಿವಾದಿ ಇಂಡಿಗನಾಳ ಗ್ರಾಮದಲ್ಲಿ ವಾಸವಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರು ಮದುವೆಯಾದ ನಂತರ ಅಣ್ಣೇಶ್ವರಕ್ಕೆ ಬಂದು ನೆಲೆಸಿದರು ಎಂದರೆ ನನಗೆ ಜ್ಞಾಪಕವಿಲ್ಲ. ನನ್ನ ತಂದೆ ವಿದ್ಯಾಭ್ಯಾಸ ಮಾಡಿಲ್ಲ. ಗ್ಯಾಂಗಮ್ಯಾನ್ ಕೆಲಸ ಸಿಗಬೇಕೆಂದರೆ ನನ್ನ ತಂದೆ ಓದಿರಲೇಬೇಕು ಎಂದರೆ ಸರಿಯಲ್ಲ. ಗ್ಯಾಂಗಮ್ಯಾನ್ ಕೆಲಸ ಸಿಕ್ಕ ನಂತರ ನಮ್ಮ ಕುಟುಂಬ ಕೊಡಿಗೇನಹಳ್ಳಿಯಲ್ಲಿ ವಾಸ ಮಾಡಲು ಪ್ರಾರಂಭ ಮಾಡಿತ್ತು ಎಂದರೆ ಸರಿಯಲ್ಲ. ಈಗ ಐಟಂ ನಂ.2 ರಲ್ಲಿ ಯಾರು ಸ್ವಾಧೀನ ಹೊಂದಿದ್ದಾರೆ ಎಂದರೆ 8 ನೇ ಪ್ರತಿವಾದಿ ದೇವರಾಜಪ್ಪ ಸ್ವಾಧೀನ ಹೊಂದಿದ್ದಾರೆ. 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಐಟಂ ನಂ.2 ನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿಯನ್ನು ಈ ದಾವೆಗೆ ಯಾಕೆ ಸೇರಿಸಿದ್ದೀರಿ? ಎಂದರೆ ಪಹಣಿಗಳು ಅವರ ಹೆಸರಿನಲ್ಲಿ ಬರುತ್ತಿರುವ ಕಾರಣದಿಂದ ಸೇರಿಸಿದ್ದೇವೆ. ಅವರಿಗೆ ಯಾವ ಆಧಾರದ ಮೇಲೆ ಪಹಣಿಗಳು ನಮೂದಾಗಿವೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮತ್ತು ಆತನ ಮಗ ಸೇರಿಕೊಂಡು 2006 ರಲ್ಲಿ ಐಟಂ ನಂ.2 ನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದನ್ನು 3 ನೇ ಪ್ರತಿವಾದಿ ನಾರಾಯಣಸ್ವಾಮಿಯವರ ಮಗಳು ಮಂಜುಳಾರವರ ಮದುವೆ ಮಾಡಲು ಮಾರಾಟ ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನಗೆ ಕೊಡಿಗೇನಹಳ್ಳಿಯಲ್ಲಿ ವಾಸ ಮಾಡುತ್ತಿದ್ದ ಬಗ್ಗೆ ಹೊರತುಪಡಿಸಿ ಈ ಆಸ್ತಿಗಳು ಹೇಗೆ ಬಂದಿದ್ದವು ಮತ್ತು ಹೇಗೆ

ವಿಲೇವಾರಿ ಆಗಿದ್ದವು ಎಂಬ ಬಗ್ಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಗೆ ಐಟಂ ನಂ.2 ಸ್ವಯಾರ್ಜಿತ ಆಸ್ತಿಯಾಗಿದ್ದು, ಅವರು 8 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ಐಟಂ ನಂ.2 ರಲ್ಲಿ ವಾದಿಗಳಿಗೆ ಯಾವುದೇ ಭಾಗ ಬರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**